ಒಂಟಿಯಾಗಿ ಪುಸ್ತಕ ಹಿಡಿದುಕೊಂಡೋ ಯೋಚನೆ ಮಾಡಿಕೊಂಡೋ ಇರಲು ಇಷ್ಟಪಡುತ್ತಿದ್ದರು. ತಮ್ಮ ಬರವಣಿಗೆಯ ಸಾಹಿತ್ಯಕ ಗುಣದ ಬಗ್ಗೆ ತೀರ ಗಮನ ಕೊಟ್ಟಿರಲಿಲ್ಲ ಅನ್ನುವುದೂ ನನ್ನ ಮನಸ್ಸಿನಲ್ಲಿರಬೇಕು.

ನಮ್ಮಪ್ಪ ನನಗಾಗಿ ಬಿಟ್ಟು ಹೋಗಿರುವ ಸೂಟ್‌ಕೇಸನ್ನು ಕಾತರದಿಂದ ದಿಟ್ಟಿಸುತ್ತಿರುವಾಗ 'ನನ್ನ ಕೈಯಲ್ಲಿ ಆಗುವುದಿಲ್ಲ,' ಅಂತಲೂ ಅನ್ನಿಸುತ್ತಿತ್ತು. ನಮ್ಮಪ್ಪ ಒಂದೊಂದು ಸಾರಿ ಪುಸ್ತಕಗಳ ಎದುರು ದಿವಾನ್ ಮೇಲೆ ಮೈ ಚಾಚಿಕೊಂಡು, ಕೈಯಲ್ಲಿದ್ದ ಪುಸ್ತಕವನ್ನೋ ನಿಯತಕಾಲಿಕವನ್ನೋ ತೊರೆದು, ಹಾಗೇ ಕನಸಿಗೆ ಸಾಗಿ ದೀರ್ಘಕಾಲ ತಮ್ಮದೇ ಯೋಚನೆಗಳಲ್ಲಿ ಮುಳುಗಿರುತ್ತಿದ್ದರು. ನಾನು ಹುಡುಗನಾಗಿದ್ದಾಗಲೂ, ಹದಿ ಹರೆಯದಲ್ಲೂ, ನಮ್ಮಪ್ಪ ಮಾಮೂಲಾಗಿ ಮಾತಾಡುವಾಗ, ಜೋಕು ಹೇಳುವಾಗ, ಮನೆಯ ಕಿರಿಕಿರಿಗೆ ಪ್ರತಿಕ್ರಿಯೆ ತೋರಿಸುವಾಗ ಇರುತ್ತಿದ್ದ ಭಾವಕ್ಕಿಂತ ತೀರ ಬೇರೆಯದೇ ಭಾವವನ್ನು ಅವರ ನೋಟ ಒಳಮುಖಿಯಾಗುತ್ತಿರುವುದರ ಮೊದಲ ಲಕ್ಷಣಗಳನ್ನು ಕಂಡಾಗ ನಮ್ಮಪ್ಪನಲ್ಲಿ ಏನೋ ಅತೃಪ್ತಿ ಇದೆ ಎಂದು ಅರ್ಥವಾಗಿ ಕಂಪಿಸುತ್ತಿದ್ದೆ. ಈಗ, ಎಷ್ಟೋ ವರ್ಷ ಕಳೆದಮೇಲೆ ಗೊತ್ತಾಗಿದೆ ಈ ಅತೃಪ್ತಿಯೇ ವ್ಯಕ್ತಿಯನ್ನು ಲೇಖಕನನ್ನಾಗಿಸುವ ಮೊದಲ ಲಕ್ಷಣ. ಬರಹಗಾರನಾಗುವುದಕ್ಕೆ ಕೇವಲ ಸಹನೆ ಮತ್ತು ಪರಿಶ್ರಮ ಮಾತ್ರ ಸಾಲದು. ಜನರ ಗುಂಪು, ಮಿತ್ರ ಸಮೂಹ, ಸಾಮಾನ್ಯವಾದ ದಿನನಿತ್ಯದ ಬದುಕು ಇವೆಲ್ಲದರಿಂದ ದೂರ ಸರಿದು ತಪ್ಪಿಸಿಕೊಂಡು ರೂಮಿನಲ್ಲಿ ಒಬ್ಬರೇ ಇರಬೇಕೆಂಬ ಒತ್ತಾಯ ಮೊದಲು ನಮ್ಮಲ್ಲಿ ತೀವ್ರವಾಗಿರಬೇಕು. ನಮ್ಮ ಬರಹದಲ್ಲಿ ಗಹನವಾದ ಲೋಕವನ್ನು ಸೃಷ್ಟಿ ಮಾಡಲು ಸಹನೆ ಬೇಕೆಂದು ಹಾರೈಸುತ್ತೇವೆ. ಆದರೆ ರೂಮಿನಲ್ಲಿ ಒಬ್ಬರೇ ಇರಬೇಕೆಂಬ ಆಸೆ ಹುಟ್ಟುತ್ತದಲ್ಲ ಅದು ನಮ್ಮನ್ನು ಸೃಷ್ಟಿ ಕ್ರಿಯೆಯಲ್ಲಿ ತೊಡಗಿಸುತ್ತದೆ. ತನ್ನ ಬಳಿ ಇರುವ ಪುಸ್ತಕಗಳನ್ನು ತೃಪ್ತಿಯಾಗುವವರೆಗೆ ಓದುವ, ತನ್ನ ಅಂತರಂಗದ ದನಿಯನ್ನಷ್ಟೇ ಆಲಿಸುವ, ಇತರರ ನುಡಿಗಳ ಬಗ್ಗೆ ತಗಾದೆ ತೆಗೆಯುವ, ಓದುತ್ತಿರುವ ಪುಸ್ತಕಗಳ ಜೊತೆ ಸಂಭಾಷಣೆಯಲ್ಲಿ ತೊಡಗುವ, ಸಂಭಾಷಿಸುತ್ತ ತನ್ನದೇ ಯೋಚನೆಗಳನ್ನು ಲೋಕವನ್ನು ಕಟ್ಟಿಕೊಳ್ಳುವ ಸ್ವತಂತ್ರ ಲೇಖಕನೊಬ್ಬನ ಕುರುಹು ಮೊದಲು ಕಾಣುವುದು ಮಾಂಟೇನ್‌ನಲ್ಲಿ. ಅವನು ಆಧುನಿಕ ಸಾಹಿತ್ಯದ ಆರಂಭ ಕಾಲದಲ್ಲಿದ್ದ. ನಮ್ಮಪ್ಪ ಮಾಂಟೇನ್‌ನನ್ನು ಮತ್ತೆ ಮತ್ತೆ ಓದುತ್ತಿದ್ದರು, ಓದುವಂತೆ ನನಗೂ ಹೇಳುತ್ತಿದ್ದರು. ಪೂರ್ವದವರೇ ಆಗಿರಲಿ ಪಶ್ಚಿಮದವರೇ ಆಗಿರಲಿ ಸಮಾಜದಿಂದ ತಮ್ಮನ್ನು ಕತ್ತರಿಸಿಕೊಂಡು, ತಮ್ಮ ಪುಸ್ತಕಗಳ ಜೊತೆಯಲ್ಲಿ ತಮ್ಮ ರೂಮಿನಲ್ಲಿ ಇದ್ದುಬಿಡುವ ಲೇಖಕರ ಪರಂಪರೆಗೆ ಸೇರಿದವನಾಗಿ ನನ್ನನ್ನು ನಾನೇ ಕಾಣಲು ಬಯಸುತ್ತೇನೆ.

ಹೀಗೆ ರೂಮಿನಲ್ಲಿ ಕೂಡಿಹಾಕಿಕೊಂಡಾಗ ನಾವಂದುಕೊಂಡಷ್ಟು ಒಂಟಿಯಾಗಿಲ್ಲ ನಾವು ಅನ್ನುವುದು ಗೊತ್ತಾಗುತ್ತದೆ. ನಮಗಿಂತ ಮೊದಲೇ ಮಾತಾಡಿ ಹೋದವರ ನುಡಿ, ಬೇರೆಯವರ ಕಥೆ, ಬೇರೆಯವರ ಪುಸ್ತಕ, ಬೇರೆಯವರ ಮಾತುಗಳು ನಾವು ಯಾವುದನ್ನು ಪರಂಪರೆ ಎನ್ನುತ್ತೇವೋ ಅದು ನಮ್ಮ ಜೊತೆಗೆ ಇರುತ್ತದೆ. ಮನುಷ್ಯಕುಲ ತನ್ನನ್ನು ತಾನು ಅರ್ಥಮಾಡಿಕೊಳ್ಳಲು ಶೇಖರಿಸಿ ಕೂಡಿಟ್ಟುಕೊಂಡಿರುವ ಅತ್ಯಂತ ಬೆಲೆಬಾಳುವ ಸಂಗ್ರಹವೇ ಸಾಹಿತ್ಯ ಅನ್ನುವುದು ನನ್ನ ನಂಬಿಕೆ. ಮನಸ್ಸು ವಿಚಲಿತಗೊಳಿಸುವ ಲೇಖಕರ ಮಾತಿಗೆ ಗಮನ ನೀಡಿದ ಸಮಾಜ, ಕುಲ, ಜನತೆ, ದೇಶಗಳು ಹೆಚ್ಚು ವಿವೇಕಿಗಳಾಗಿ, ಶ್ರೀಮಂತವಾಗಿ ಮುಂದುವರೆದಿವೆ. ಪುಸ್ತಕಗಳನ್ನು ಸುಡುವುದು, ಲೇಖಕರನ್ನು ನಿಂದಿಸುವುದು ಇವು ಕರಾಳವಾದ ಕಾಲ ನಮ್ಮನ್ನು ಆವರಿಸುತ್ತಿದೆ ಅನ್ನುವುದರ ಸಂಕೇತ ಅನ್ನುವುದೂ ನಮಗೆಲ್ಲ ಗೊತ್ತು. ಆದರೆ,